

ಬಾಗಿಲ ಕಿಂಡಿಯಲ್ಲಿ ಒಳಗೆ ಹಣಿಕಿಕ್ಕಿ ನೋಡಿದರೆ ಸಾಯಬೇಕೆಂದು ಸೀಲಿಂಗ್‌ಗೆ ಹಾಕಿದ್ದ ಸೀರೆ ತುದಿಯನ್ನೊಂದು ಕೈಯಲ್ಲಿ ಮತ್ತೊಂದು ಕೈಯನ್ನು ಹೊಟ್ಟೆಯ ಮೇಲಿಟ್ಟುಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಳು. ನಿಮಿಷದ ಹಿಂದೆ ಭಾವಪ್ರಪಂಚವನ್ನು ಹಾಸಿಕೊಂಡು ಆಕಾಶಮಾರ್ಗದಲ್ಲಿ ಸಂಚರಿಸುತ್ತಲಿದ್ದ ಹುಟ್ಟುವೇಷದ ಯಕ್ಷಿಯೊಬ್ಬಳ ಪಟವನ್ನು ಬರೆಯುತ್ತಿದ್ದವ ಈಗ ಕೈಕಾಲು ಕಳೆದುಕೊಂಡಂತೆ ಚಡಪಡಿಸುತ್ತಿದ್ದ. ಆಕೆ ಈ ಗಂಡಸಿನ ಕೊಳಕುತನ, ಸಣ್ಣತನ, ಕಚ್ಚೆಹರಕುತನ ತನ್ನ ಹಾಸಿಗೆಯವರೆಗೂ ಯಾವಳನ್ನೋ ಕರೆದುಕೊಂಡು ಬರುವಷ್ಟು ಹದ್ದು ಮೀರಿತಲ್ಲ, ಇವನ ಸೆಡವಿನ ಮಗ್ಗಲು ಮುರಿಯಬೇಕು. ಡೈವೋರ್ಸ್ ಕೊಟ್ಟರೆ ನಾಳೆ ದಿನ ಮತ್ತೆ ಅದೇ ಆ ಕೊಳಕು ಕೇರಿಯ